OS No : 11/2022

P.W-1

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 21.11.2024 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ,**

ನಾನು ಈ ದಾವೆಯ ವಾದಿಯ ಪರವಾಗಿ ಎಸ್.ಪಿ.ಎ ದಾರಕನಾಗಿದ್ದು ಈ ದಿನ ನಮ್ಮ ವಕೀಲರ ಮೂಲಕ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಹಾಗೂ ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

ನನ್ನ ಹೆಂಡತಿ ನನ್ನ ಹೆಸರಿಗೆ ಬರೆದುಕೊಟ್ಟ ಸಾಮಾನ್ಯ ಅಧಿಕಾರ ಪತ್ರ ದಾಖಲಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. 2020-21 ನೇ ಸಾಲಿನ ಐ.ಟಿ. ರಿರ್ಟನ್ಸ್ ದಾಖಲೆಯನ್ನು ನಿಪಿ- 2 ಎಂದು, ನನ್ನ ಹೆಂಡತಿಯ ಉಳಿತಾಯ ಖಾತೆಯ ಸ್ಟೇಟ್‌ಮೆಂಟ್‌ನ್ನು ನಿಪಿ-3 ಎಂದು, ಲೀಗಲ್ ನೋಟಿಸ್ ನ್ನು ನಿಪಿ-4 ಎಂದು, ಅಂಚೆ ರಸೀದಿಯನ್ನು ನಿಪಿ-5 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ- 6 ಎಂದು, ಪ್ರನೋಟ್ ದಾಖಲೆಯನ್ನು ನಿಪಿ- 7 ಎಂದು, ಸದರಿ ದಾಖಲೆಯನ್ನು ಪ್ರತಿವಾದಿ- ಕೆ.ಜಿ.ಬುದ್ದಣ್ಣರವರು ನನ್ನ ಹೆಂಡತಿಯ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಗೆ ಜಿ. ಮಂಜುನಾಥ, ಬಿ.ಹೆಚ್. ರಮೇಶ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಸದರಿ ಪತ್ರವನ್ನು ಹೆಚ್.ಗವೀಯಪ್ಪ ರವರು ಬರೆದಿರುತ್ತಾರೆ.

**(ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ,**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**